ಪ್ರ.72 (18+109)

**ಕರ್ನಾಟಕ ವಿಧಾನಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಂ. ನಾರಾಯಣಸ್ವಾಮಿ ಇವರು ನಿಯಮ 72 ರಡಿ ಮಂಡಿಸಿರುವ ಸೂಚನೆಗೆ ಸರ್ಕಾರದ ಹೇಳಿಕೆ**

**ಸೂಚನೆ:-**

ಕೆ.ಆರ್.ಪುರ ವಿಧಾನಸಭಾ ಕ್ಷೇತ್ರ, ವಾರ್ಡ್ ನಂ.81 ರ ಸರ್ವೆ ನಂ.199 ದಾಖಲೆಗಳಂತೆ ಸುಮಾರು 7 ಎಕರೆ ಜಮೀನಿದ್ದು ಇದು ಸರ್ಕಾರಕ್ಕೆ ಸೇರಿದೆ. ಇತ್ತೀಚಿಗೆ ಸ್ಥಳೀಯ ರಾಜಕೀಯ ಮುಖಂಡರೊಬ್ಬರು ಈ ಸರ್ಕಾರಿ ಜಮೀನಿನಲ್ಲಿ ಅನಧಿಕೃತವಾಗಿ ಮನೆಗಳನ್ನು ನಿರ್ಮಿಸಿ ಸುಮಾರು 15 ರಿಂದ 20 ಲಕ್ಷ ರೂಗಳ ಮೊತ್ತಕ್ಕೆ ಸ್ಥಳೀಯರಿಗೆ ಮಾರಾಟ ಮಾಡಿ ಅಕ್ರಮವನನ್ನು ಎಸಗಿದ್ದು, ಪ್ರಸ್ತುತ ಇನ್ನೂ 10 ರಿಂದ 15 ಮನೆಗಳನ್ನು ನಿರ್ಮಾಣ ಮಾಡುತ್ತಿದ್ದಾರೆ, ಈ ಬಗ್ಗೆ ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿಗಳು, ಬೆಂಗಳೂರು ಮಹಾನಗರ ಪಾಲಿಕೆ ಆಯುಕ್ತರು, ಜಂಟಿ ಆಯುಕ್ತರುಗಳ ಗಮನಕ್ಕೆ ತಂದರೂ ಕೂಡ ಇದರ ಬಗ್ಗೆ ಯಾವುದೇ ಕ್ರಮವಹಿಸದೇ, ಈ ಅಕ್ರಮಗಳಿಗೆ ಅಧಿಕಾರಿಗಳು ಸಹಭಾಗಿದಾರರಾಗಿ ಸರ್ಕಾರಿ ಜಮೀನನ್ನು ಕಾಪಾಡಲು ವಿಫಲರಾಗಿದ್ದಾರೆ. ಲೋಕಾಯುಕ್ತವೂ ಕೂಡ ದೂರು ದಾಖಲಿಸಿದ್ದರೂ ಸಹ ಯಾವುದೇ ಕಾನೂನು ಕ್ರಮ ಕೈಗೊಳ್ಳದೇ ಅಕ್ರಮ ಕಟ್ಟಡ ನಿರ್ಮಾಣ ಕಾರ್ಯ ನಡೆಯುತ್ತಲೇ ಇದೆ.

ಸರ್ಕಾರದ ಜಮೀನುಗಳನ್ನು ರಕ್ಷಿಸಲು ನಿಯೋಜಿಸಲ್ಪಟ್ಟ ಸರ್ಕಾರಿ ಅಧಿಕಾರಿಗಳೇ ಈ ಕಾನೂನು ಬಾಹಿರ ಚಟುವಟಿಕೆಗಳಿಗೆ ಉತ್ತೇಜನ ನೀಡುತ್ತಿರುವ ಈ ಸಂಗತಿಯು ಸಾರ್ವಜನಿಕ ವಿಚಾರವಾಗಿರುವುದರಿಂದ ಇದರ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಹೇಳಿಕೆ:-**

ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್. ಪುರ ಹೋಬಳಿ, ಮಹದೇವಪುರ ಗ್ರಾಮದ ಸ.ನಂ.199ರ ಜಮೀನು ಮೂಲತಃ ಖರಾಬು ಬಂಡೆ ಜಮೀನಾಗಿದ್ದು, ಆಕಾರ್‌ಬಂದಿನಂತೆ ಒಟ್ಟು 07-18 ಎಕರೆ/ಗುಂಟೆ ವಿಸ್ತೀರ್ಣವಿದ್ದು, ಸದರಿ ಜಮೀನಿನಲ್ಲಿ 0-20 ಎಕರೆ/ಗುಂಟೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಆಟಕ ಮೈದಾನಕ್ಕೆ ಕಾಯ್ದಿರಿಸಿದೆ. 02-28 ಎ/ಗು ಜಮೀನನ್ನು ಅಂಬೇಡ್ಕರ್ ಭವನಕ್ಕೆ ಕಾಯ್ದಿರಿಸಲಾಗಿರುತ್ತದೆ. ಉಳಿಕೆ 2-00 ಎಕರೆ ಜಮೀನಿನಲ್ಲಿ ಸುಮಾರು ವರ್ಷಗಳಿಂದ 100 ಮನೆಗಳಿದ್ದು, ಈ ಪೈಕಿ ಕೆಲವೊಂದು ಮನೆಗಳು ಇತ್ತೀಚಿಗೆ ನಿರ್ಮಾಣ ಮಾಡಿರುವುದು ಕಂಡುಬಂದಿದ್ದು, ಸದರಿ ಮನೆಗಳ ಸರ್ವೆ ಕಾರ್ಯ ಮಾಡಿ ಅಕ್ರಮ ಒತ್ತುವಾರಿದಾರರ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

(ಆರ್‌ಡಿ 57 ಎಲ್‌ಜಿಕ್ಯೂ 2021)

(ಆರ್. ಅಶೋಕ)
ಕಂದಾಯ ಸಚಿವರು.